# ಪ್ರಾಮಾಣಿಕ ದೋಸೆ!

ಅತ್ಯಂತ ಹೆಚ್ಚು ಬಾಳಿಕೆಯ ದೋಸೆ ಯಾವುದು? ಇದೊಂದು ಅಸಂಗತ ಪ್ರಶ್ನೆಯಾದರೂ, ಕನ್ನಡ ಚಿತ್ರರಂಗದಲ್ಲಿ ವರ್ಷಗಳ ಕಾಲ ಸುದ್ದಿಯಲ್ಲಿರುವ, ಈಗಲೂ ಪ್ರೇಕ್ಷಕರು ಕುತೂಹಲದಿಂದ ನಿರೀಕ್ಷಿಸುತ್ತಿರುವ ದೋಸೆ ಒಂದಿದೆ. ಅದು 'ನೀರ್‌ದೋಸೆ.

'ಸಿದ್ಲಿಂಗು' ಚಿತ್ರದ ಯಶಸ್ಸಿನ ಬೆನ್ನಿಗೆ ನಿರ್ದೇಶಕ ವಿಜಯಪ್ರಸಾದ್ ಅವರು ಮಹತ್ವಾಕಾಂಕ್ಷೆಯಿಂದ ಆರಂಭಿಸಿದ ಸಿನಿಮಾ 'ನೀರ್‌ದೋಸೆ'. ಆದರೆ, ಪ್ರಮುಖ ಕಲಾವಿದರೊಬ್ಬರು ಚಿತ್ರದಿಂದ ಹೊರನಡೆಯುವ ಮೂಲಕ ಅರ್ಧ ಚಿತ್ರೀಕರಣಗೊಂಡಿದ್ದ ಸಿನಿಮಾ ನಿಲ್ಲಬೇಕಾಯಿತು. ರಾಜಿ ಪಂಚಾಯತಿ, ನಿರೀಕ್ಷೆಗಳೆಲ್ಲ ಹುಸಿಯಾದ ಮೇಲೆ ನಿರ್ದೇಶಕರು ಬೇರೊಬ್ಬ ಪಾತ್ರಧಾರಿಯನ್ನು ಗೊತ್ತುಪಡಿಸಿಕೊಂಡರು. ಈ ನಡುವೆ 'ದೋಸೆ'ಯ ಸಹವಾಸವೇ ಬೇಡ ಎಂದು ನಿರ್ಮಾಪಕರು ಬದಲಾದರು. ಕೊನೆಗೆ ಹೊಸ ನಿರ್ಮಾಪಕರನ್ನೂ ಹುಡುಕಿಕೊಂಡ ವಿಜಯಪ್ರಸಾದ್ ಈಗ ಸಿನಿಮಾವನ್ನು ತೆರೆ ಕಾಣಿಸುವ ಹಂತಕ್ಕೆ ಬಂದಿದ್ದಾರೆ.

ಅನೂಪ್ ಸೀಳಿನ್ ಸಂಗೀತ ನಿರ್ದೇಶನದ ಗೀತೆಗಳ ಧ್ವನಿಮುದ್ರಿಕೆ ಇನ್ನೇನು ಪೇಟೆಗೆ ಬರುವ ಹಂತದಲ್ಲಿದೆ. ಅದರ ಬೆನ್ನಿಗೆ ಚಿತ್ರವನ್ನು ತೆರೆ ಕಾಣಿಸುವ ಉತ್ಸಾಹ 'ನೀರ್‌ದೋಸೆ'ಯ ನಿರ್ಮಾಪಕರಾದ ಪ್ರಸನ್ನ ಹಾಗೂ ಶಶಿಕಲಾ ಬಾಲಾಜಿ ಅವರದು.

ಜಗ್ಗೇಶ್, ಹರಿಪ್ರಿಯಾ, ಸುಮನ್ ರಂಗನಾಥ್ ಹಾಗೂ ದತ್ತಣ್ಣ 'ನೀರ್‌ದೋಸೆ'ಯ ತಾರಾಗಣದಲ್ಲಿರುವ ಪ್ರಮುಖರು. ಜಗ್ಗೇಶ್ ಅವರಂತೂ ವಿಜಯ್‌ಪ್ರಸಾದ್ ಅವರಿಗೆ ಅವಕಾಶ ಸಿಕ್ಕಾಗಲೆಲ್ಲ ತಮ್ಮ ಬೆಂಬಲ ವ್ಯಕ್ತಪಡಿಸುತ್ತಲೇ ಇದ್ದಾರೆ. ಸಿನಿಮಾದ ಗಟ್ಟಿತನದ ಬಗ್ಗೆ ಅಪರಿಮಿತ ವಿಶ್ವಾಸ ಇರುವ ಜಗ್ಗೇಶ್ ಅವರಿಗೆ ನಿರ್ದೇಶಕರ ಪ್ರತಿಭೆಯ ಬಗ್ಗೆಯೂ ಅಭಿಮಾನವಿದೆ. 'ಸ್ವಂತ ಕಥೆ ನೆಚ್ಚಿಕೊಂಡು ಸಿನಿಮಾ ಮಾಡಿರುವ ನಿರ್ದೇಶಕರ ಪ್ರಾಮಾಣಿಕತೆ ಗೆದ್ದೇಗೆಲ್ಲುತ್ತದೆ' ಎನ್ನುವ ವಿಶ್ವಾಸ ಅವರದು. ಸುಜ್ಞಾನ್ ಛಾಯಾಗ್ರಹಣ ಹಾಗೂ ಸುರೇಶ್ ಅರಸ್ ಸಂಕಲನ ಚಿತ್ರಕ್ಕಿದೆ.





# 'ಭಂಡಾರಿ ಸೋದರರ'ರ ರಥಯಾತ್ರೆ

'ರಂಗಿತರಂಗ'ದ ಮೂಲಕ ಗಾಂಧಿನಗರದಲ್ಲಿ 'ಡೆನ್ನಾನ ಡೆನ್ನಾನ' ನಾದದಲೆಗಳನ್ನು ಮೊಳಗಿಸಿದ ಅನೂಪ್ ಹಾಗೂ ನಿರೂಪ್ 'ಭಂಡಾರಿ ಸಹೋದರರು' ಈಗ ಹೊಸ ಸಿನಿಮಾದ ಹುಮ್ಮಸ್ಸಿನಲ್ಲಿದ್ದಾರೆ. ಅನೂಪ್ ನಿರ್ದೇಶನದ 'ರಾಜರಥ' ಚಿತ್ರದ ಮುಹೂರ್ತ ಕಳೆದ ವಾರ ಅದ್ದೂರಿಯಾಗಿ ನಡೆದಿದೆ.

ಅನೂಪ್ ಪಾಲಿಗೆ 'ರಾಜರಥ' ಕೂಡ ಮತ್ತೊಂದು ಪ್ರಯೋಗಶೀಲ ಸಿನಿಮಾ. ಮೊದಲ ಚಿತ್ರದ ಅನೇಕ ಕಲಾವಿದರು ಹಾಗೂ ತಂತ್ರಜ್ಞರನ್ನು ಅವರು ಎರಡನೇ ಚಿತ್ರಕ್ಕೂ ಮುಂದುವರಿಸಿದ್ದಾರೆ. ನಿರೂಪ್ ಈ ಚಿತ್ರಕ್ಕೂ ನಾಯಕರಾದರೆ, ಆವಂತಿಕಾ ಶೆಟ್ಟಿ ನಾಯಕಿಯಾಗಿ ಮುಂದುವರಿದಿದ್ದಾರೆ. ವಿಶೇಷ ಪಾತ್ರದಲ್ಲಿರುವ ರವಿಶಂಕರ್ ತಾರಾಗಣದಲ್ಲಿರುವ ಮತ್ತೊಂದು ದೊಡ್ಡ ಹೆಸರು. ಅಮೆರಿಕದ ವಿಶು ಹಾಗೂ ಗೆಳೆಯರು ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ.

'ರಂಗಿತರಂಗ'ದ ವಿಲಿಯಮ್ ಡೇವಿಡ್ ಅವರ ಛಾಯಾಗ್ರಣ 'ರಾಜರಥ' ಚಿತ್ರಕ್ಕೂ ಮುಂದುವರೆದಿದೆ. ಜೊತೆಯಾಗಿ ಮತ್ತೊಮ್ಮೆ ಕೆಲಸ ಮಾಡುತ್ತಿದ್ದಾರೆ. ಚಿತ್ರದಲ್ಲಿನ ಗೀತೆಗಳಿಗೆ ಅನೂಪ್ ಅವರೇ ಸಂಗೀತ ನೀಡುತ್ತಿದ್ದು, ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ ಸಂಯೋಜಿಸಲಿದ್ದಾರೆ. 'ರಾಜರಥ' ಒಂದು ಕಾಮಿಡಿ–ರೊಮ್ಯಾಂಟಿಕ್ ಸಿನಿಮಾ ಎನ್ನುವುದು ನಿರ್ದೇಶಕರ ಬಣ್ಣನೆ. ಈ ಚಿತ್ರದಲ್ಲಿ ಸಾಕಷ್ಟು ಮನರಂಜನೆ ಇರಲಿದೆ ಎನ್ನುವುದನ್ನು ಅವರು ಒತ್ತಿಹೇಳುತ್ತಾರೆ. ಬೆಂಗಳೂರು ಹಾಗೂ ಊಟಿಗಳಲ್ಲಿ ಚಿತ್ರದ ಬಹುತೇಕ ಶೂಟಿಂಗ್ ನಡೆಯಲಿದೆ.